ಭಿನ್ನವಾಗಿತ್ತು. ಭಾಷೆಯೂ (ತೆಲುಗೇ ಆದರೂ) ಆಡುವ ರೀತಿಯಲ್ಲಿ ಭಿನ್ನವಾಗಿತ್ತು. ಹೀಗಾಗಿ ಸಾಂಸ್ಕೃತಿಕ ಏಕೀಕರಣ ಕಷ್ಟವೇ ಆಯಿತು. ಮಧ್ಯ ಯೂರೋಪು ತನ್ನ ಭಾಷೆ-ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಸಾಮಾಜಿಕ ಚಳವಳಿಗಳನ್ನು ಕಂಡಿರುವುದಾದರೆ, ತೆಲಂಗಾಣ ಕೂಡಾ ಅದಕ್ಕೆ ಹೊರತಲ್ಲ.

ಈ ಮಾತುಗಳನ್ನು ಹೇಳುತ್ತಲೇ ಕುಂದೆರಾ ಪೂರ್ಣವಾಗಿ ತನ್ನ ಭಾಷೆಯನ್ನು ತ್ಯಜಿಸಿ, ಬೇರೊಂದು ಸಂಸ್ಕೃತಿಯನ್ನೂ ಭಾಷೆಯನ್ನೂ ಅಪ್ಪುತ್ತಾನೆ. ಅವನ ಕಥನದ ಶೈಲಿಯಲ್ಲಿ, ಅದರ ಹರವಿನಲ್ಲಿ, ಅದರಲ್ಲಿರಬಹುದಾದ ಕಾಳಜಿಗಳಲ್ಲಿ ಮೂಲಭೂತವಾಗಿ ಯಾವುದೇ ಬದಲಾವಣೆಗಳಾಗದಿದ್ದರೂ, ಭಾಷಾ ಪಲ್ಲಟವಾಗುತ್ತದೆ. ಕುಂದೆರಾನ ಸಾಹಿತ್ಯದ ಕಾಳಜಿಗಳಲ್ಲಿ ಯಾವುದೇ ಪಲ್ಲಟವಾಗದಿದ್ದರೂ ಅವನ ನಿಜ ಜೀವನದಲ್ಲಿ ಅವನು ಮಧ್ಯಯೂರೋಪಿನ ಸಂಸ್ಕೃತಿಯ ಬಗ್ಗೆ ವಕಾಲತ್ತು ಮಾಡುತ್ತಲೇ ಫ್ರೆಂಚ್ ಭಾಷೆಗೆ ಮೊರೆಹೋಗುವುದು ವಿಪರ್ಯಾಸವೇ ಹೌದು. ಆದರೆ, ಅವನ ಒಟ್ಟಾರೆ ಬರವಣಿಗೆಯನ್ನು ಕಂಡಾಗ ಫ್ರೆಂಚ್ ಭಾಷೆಯ ಸಂದರ್ಭ ಪ್ರಧಾನವಾಗಿರುವುದು ಕಾಣಿಸುವುದಿಲ್ಲ.

ಫ್ರಾಯ್ಡ್ ಪೋಲೆಂಡಿಗೆ ಸಂದವನು. ಆದರೆ, ಬೆಳೆದದ್ದೂ ಚೆಕೊಸ್ಲೊವೇಕಿಯಾದ ಪ್ರಾಗ್‌ನಲ್ಲಿ, ವಿಯನ್ನಾದ ಕವಿ ಜೋಸೆಫ್ ರಾಥ್ ಪೋಲೆಂಡಿಗೆ ಸೇರಿದವನು. ಫ್ರಾಂಜ್ ಕಾಫ್ಕಾನ ತಂದೆ ಚೆಕ್ ಭಾಷೆ ಮಾತಾಡುತ್ತಿದ್ದರು. ಆದರೆ, ಅವನು ಜರ್ಮನ್ ಭಾಷೆಯನ್ನು ತನ್ನದಾಗಿಸಿಕೊಂಡ. ಇನ್ನೂ ಒಂದಷ್ಟು ಜನ ಹುಟ್ಟಿದ ಜಾಗ, ಬೆಳೆದ ಜಾಗ ಮತ್ತು ಆಯ್ದ ಭಾಷೆಯ ಭಿನ್ನತೆಯ ಉದಾಹರಣೆಗಳನ್ನು ಕುಂದೆರಾ ಕೊಡುತ್ತಾನೆ. ಎಲ್ಲವೂ ಮಧ್ಯ ಯುರೋಪಿನ ಭೂಪ್ರಾಂತಕ್ಕೆ ಸೇರಿದವರು. ಆದರೆ, ಅವನು ಕೊಟ್ಟ ಒಂದೊಂದು ಹೆಸರೂ ಯಹೂದ್ಯರದ್ದು. ಯಹೂದ್ಯರ ಬುದ್ಧಿ ಪ್ರಖರತೆಯಿಂದ ಮಧ್ಯ ಯುರೋಪ್ ಪಡೆದಷ್ಟು ಲಾಭ ಪ್ರಪಂಚದ ಬೇರಾವ ಭಾಗವೂ ಪಡೆದಿಲ್ಲವೆಂದು ಕುಂದೆರಾ ಹೇಳುತ್ತಾನೆ. ಎಲ್ಲಿದ್ದರೂ ಹೊರಗಿನವರು, ಎಲ್ಲಿದ್ದರೂ ಸ್ಥಳೀಯರೂ ಆಗಿರುವ ಯಹೂದ್ಯರು ಭಾಷಾ ವೈವಿಧ್ಯವನ್ನು ತಂದುಕೊಟ್ಟು ಕಾಸ್ಮೊಪಾಲಿಟನ್ ಪ್ರವೃತ್ತಿ ಬೆಳೆಯಲು ಕಾರಣರಾದರು. ತಾನು ಯಹೂದ್ಯನಲ್ಲದಿದ್ದರೂ ತನ್ನದೇ ಸಂಸ್ಕೃತಿಯಂತೆ ಪರಿಗಣಿಸುವುದಾಗಿ ಕುಂದೆರಾ ಹೇಳುತ್ತಾನೆ. ಬಹುಶಃ ಇದೇ ಅವನನ್ನು ಪ್ಯಾರಿಸ್ಸಿನಲ್ಲಿ ಒಳಗಿನವನೂ ಹೊರಗಿನವನೂ ಆಗಿ ಮುಂದುವರೆಯಲು ಎಡೆಮಾಡಿಕೊಟ್ಟಿರಬಹುದು.

'ಭಾಷೆ ಸಾಯುವುದಿಲ್ಲ. ಅದಕ್ಕೆ ಭೂಗೋಳವೂ ಬೇಕಿಲ್ಲ' ಎನ್ನುವಂತೆ ವಾದಿಸಿದವ ಐಸಾಕ್ ಬಾಷೆವಿಸ್ ಸಿಂಗರ್. ನೊಬೆಲ್ ಬಹುಮಾನ ಸ್ವೀಕೃತಿ ಭಾಷಣದಲ್ಲಿ ಸಿಂಗರ್ ಹೀಗೆ ಹೇಳುತ್ತಾನೆ:

"ಜನ ನನ್ನನ್ನು 'ನೀನು ಸಾಯುತ್ತಿರುವ ಭಾಷೆಯಲ್ಲಿ ಯಾಕೆ ಬರೆಯುತ್ತೀ?' ಎಂದು ಕೇಳುತ್ತಾರೆ. ಅದನ್ನು ಕೆಲವು ವಾಕ್ಯಗಳಲ್ಲಿ ವಿವರಿಸುತ್ತೇನೆ.

ಮೊಟ್ಟಮೊದಲು ನಾನು ದೆವ್ವಗಳ ಕಥೆಗಳನ್ನು ಬರೆಯುತ್ತೇನೆ. ದೆವ್ವಗಳ ಕಥೆಗಳಿಗೆ ಸಾಯುತ್ತಿರುವ ಭಾಷೆಯೇ ಸರಿ. ಭಾಷೆ ಸತ್ತಷ್ಟೂ ದೆವ್ವ ಜೀವಂತವಾಗುತ್ತದೆ. ದೆವ್ವಗಳು ಯಿಡ್ಡಿಶ್ ಭಾಷೆಯನ್ನು ಪ್ರೀತಿಸುತ್ತವಲ್ಲದೇ, ನನಗೆ ತಿಳಿದಂತೆ ಆ ಭಾಷೆಯಲ್ಲೇ ಮಾತಾಡುತ್ತವೆ.

ಎರಡನೆಯದು. ನಾನು ದೆವ್ವಗಳಲ್ಲಿ ನಂಬಿಕೆಯಿಟ್ಟಿರುವುದಲ್ಲದೇ ಪುನರುತ್ಥಾನವನ್ನೂ ನಂಬುತ್ತೇನೆ. ಮುಂದೊಂದು ದಿನ ಯಿಡ್ಡಿಶ್ ಶವಗಳು ತಮ್ಮ ಗೋರಿಗಳಿಂದೆದ್ದು ಬಂದಾಗ ಕೇಳುವ ಮೊದಲ ಪ್ರಶ್ನೆ: 'ಯಾವುದಾದರೂ ಹೊಸ ಯಿಡ್ಡಿಶ್ ಪುಸ್ತಕ ಬಂದಿದೆಯೇ?' - ಅವರುಗಳಿಗೆ ಯಿಡ್ಡಿಶ್ ಜೀವಂತವಾಗಿರುತ್ತದೆ.

ಮೂರನೆಯದಾಗಿ, 2000 ವರ್ಷಗಳವರೆಗೆ ಹೀಬ್ರೂ ಸತ್ತಿತ್ತು. ಇದ್ದಕ್ಕಿದ್ದಂತೆ ಅದು ಜೀವ ಪಡೆದಿದೆ. ಅದೇ ಯಿಡ್ಡಿಷ್‌ಗೂ ಆಗಬಹುದು. (ಆ ಜಾದೂ ಹೇಗಾಗುತ್ತದೆಂದು ನನಗೆ ಗೊತ್ತಿಲ್ಲ)

ನಾಲ್ಕನೆಯ ಸಣ್ಣ ಕಾರಣವೂ ಇದೆ. ಯಿಡ್ಡಿಶ್ ಸಾಯುತ್ತಿರುವ ಭಾಷೆಯಿರಬಹುದು. ಆದರೆ, ಅದು ನನಗೆ ಚೆನ್ನಾಗಿ ಗೊತ್ತಿರುವ ಏಕೈಕ ಭಾಷೆ. ಮಾತೃಭಾಷೆ. ತಾಯಂದಿರಿಗೆ ಎಂದೂ ಸಾವಿರುವುದಿಲ್ಲ."

ಮಿಲನ್ ಕುಂದೆರಾಗೆ ನೊಬೆಲ್ ಬರಲಿಲ್ಲ. ಬಂದಿದ್ದರೆ ಅವನ ಸ್ವೀಕೃತಿ ಭಾಷಣದಲ್ಲೂ ಈ ರೀತಿಯ ಒಳನೋಟಗಳು ಸಿಗಬಹುದಿತ್ತು.

●